(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ವರ್ಷ ಒಂದಕ್ಕೆ ಖರೀದಿಸುವ ಬಸ್ಸುಗಳ ಹಾಗೂ ಟಯರುಗಳ ಸಂಖ್ಯೆ ಎಷ್ಟು?

(ಆ) ಪ್ರತಿ ಸಾಲಿಗೆ ಬೇಕಾಗುವ ಒಟ್ಟು ಟೈರಿನ ಸಂಖ್ಯೆ ಎಷ್ಟು? ಹಾಗೂ ಹಾಳಾದ ಟೈರು ಗಳನ್ನು ಯಾವ ರೀತಿ ವಿಲೇವಾರಿ ಮಾಡಲಾಗುವುದು?

(ಇ) ಟೈರೊಂದರ ಬೆಲೆ ಎಷ್ಟಾಗುವುದು?

ಶ್ರೀ ವೀರಣ್ಣ (ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಮಂತ್ರಿಗಳು).—

(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೧೯೮೫–೮೬ನೇ ಸಾಲಿನಲ್ಲಿ ಒಟ್ಟು ೧೩೪೮ ಹೊಸ ಬಸ್ಸುಗಳನ್ನು ಖರೀದಿಸಿದೆ. ಮತ್ತು ಮುಂದಿನ ವರ್ಷ ೧೯೮೬–೮೭ನೇ ಸಾಲಿನಲ್ಲಿ ಸುಮಾರು ೧೭೩೬ ಹೊಸ ಬಸ್ಸುಗಳನ್ನು ಸೇರಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ, ೧೯೮೫–೮೬ನೇ ವರ್ಷ ದಲ್ಲಿ ೪೯,೧೭೨ ಹೊಸ ಟೈರುಗಳನ್ನು ಕೊಳ್ಳಲಾಯಿತು.

(ಆ) ೧೯೮೬–೮೭ರಲ್ಲಿ ಅಂದರೆ ೧ನೇ ಏಪ್ರಿಲ್ ೧೯೮೬ರಿಂದ ೩೧ನೇ ಮಾರ್ಚ್ ೧೯೮೭ರ ವರೆಗೆ ೪೯,೪೯೯ ಹೊಸ ಟೈರುಗಳು ಬೇಕಾಗುವ ನಿರೀಕ್ಷೆ ಇದೆ. ಅನುಪಯುಕ್ತ ಟೈರುಗಳನ್ನು ತಿಂಗಳಿಗೊಮ್ಮೆ ನಡೆಯುವ ಸಾರ್ವಜನಿಕ ಟೆಂಡರ್ ಮತ್ತು ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

(ಇ) ಈಗ ಕೊಳ್ಳುತ್ತಿರುವ ೯೦೦ ೨೦–೧೪ ಪ್ಲೈ ನೈಲಾನ್ ಟೈರು, ಟ್ಯೂಬ್ ಮತ್ತು ಫ್ಲಾಪ್ ಗಳ ಒಟ್ಟು ಬೆಲೆಯು (ತೆರಿಗೆಗಳು ಸೇರಿದಂತೆ) ಸರಾಸರಿ ೪೨೦೦.೦೦ ರೂ.ಗಳು.

ಹೋಟೆಲ್ ತಿಂಡಿಗಳ ಬೆಲೆ ಬೇರೆ ರಾಜ್ಯಗಳಿಗಿಂತ ಜಾಸ್ತಿಯಾಗಿರುವ ಬಗ್ಗೆ

೭೯ (೧೪೭) ಶ್ರೀ ಗೋಪಾಲ ಮುಕುಂದ ಕಾನಾಡೆ (ಖಿರ್ಸಿ).—ಮಾನ್ಯ ಕಾನೂನು, ಸಂಸದೀಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

(ಅ) ರಾಜ್ಯದ ಉಪಹಾರ ಗೃಹಗಳಲ್ಲಿನ ಬೆಲೆಗಳು ಇತರ ರಾಜ್ಯಗಳಲ್ಲಿನ ಬೆಲೆಗಳಿಗಿಂತ ಜಾಸ್ತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

(ಆ) ಹಾಗಿದ್ದಲ್ಲಿ ಅದನ್ನು ಕಡಿಮೆಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ಹಾಗೂ ಆಹಾರ ನಾಗರೀಕ ಮಂತ್ರಿ ಗಳು).—

(ಅ) ಇಲ್ಲ.

(ಆ) ರಾಜ್ಯದಲ್ಲಿನ ಕೆಲವು ಹೋಟೆಲುಗಳಲ್ಲಿ ಬೆಲೆಗಳು ಜಾಸ್ತಿಯಾಗಿರುವುದು ಕಂಡು ಬಂದಿದೆ. ಕಳೆದ ಸುಮಾರು ಎರಡು ವರ್ಷಗಳಿಂದೀಚೆಗೆ ಈ ಹೆಚ್ಚಳ ಕಂಡುಬರುತ್ತಿದೆ. ಈ ವಿಷಯದಲ್ಲಿ ಸೂಕ್ತ ಸಲಹೆ ತೆಗೆದುಕೊಳ್ಳಲು ಸರ್ಕಾರದವರು ಒಂದು ಸಮಿತಿಯನ್ನು ರಚಿಸಿರುತ್ತಾರೆ. ಕಳೆದ ವರ್ಷ ತಿಂಡಿ ಪದಾರ್ಥಗಳ ಬೆಲೆ ಹೆಚ್ಚುವರಿಯನ್ನು ಗಮನಿಸಿ, ಮಾನ್ಯ ಆಹಾರ ಮಂತ್ರಿಗಳು ೧೯೮೫ನೇ ಮಾರ್ಚ್ ತಿಂಗಳಿನಲ್ಲಿ ಒಂದು ಸಭೆ ನಡೆಸಿ ಹೋಟೆಲ್ ಮಾಲೀಕರುಗಳಿಗೆ ತಿಳುವಳಿಕೆ ನೀಡಿ ತಿಂಡಿ ಪದಾರ್ಥಗಳ ಬೆಲೆಯನ್ನು ಹೆಚ್ಚಿಸದಂತೆ ಮನವಿ ಮಾಡಿಕೊಂಡರು. ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರು ತಮ್ಮ ಸಂಕಷ್ಟಗಳನ್ನು ವಿವರಿಸಿ ಆಹಾರ ಪದಾರ್ಥಗಳು, ಎಣ್ಣೆ, ವಿದ್ಯುತ್, ಕೂಲಿ, ನೌಕರರ ಸಂಬಳ ಇವೆಲ್ಲ ಹೆಚ್ಚಿದ್ದರೂ ಸಹ ಅವರು ಇನ್ನು ಮುಂದೆ ಬೆಲೆಗಳನ್ನು ಹೆಚ್ಚಿಸುವುದಿಲ್ಲ ವೆಂದು ಆಶ್ವಾಸನೆ ಕೊಟ್ಟಿರುತ್ತಾರೆ. ಸರ್ಕಾರದ ವತಿಯಿಂದ ಹೋಟೆಲುಗಳಿಗೆ ಸೀಮೆಎಣ್ಣೆಯ ಹೊರತಾಗಿ ಮತ್ತಾವ ನಿಯಂತ್ರಿತ ಪದಾರ್ಥಗಳನ್ನು ಕೊಡುತ್ತಿಲ್ಲ. ಹೋಟೆಲ್‌ನವರು ತಮ್ಮ ಬೇಡಿಕೆಗಳನ್ನು ಮುಕ್ತ ಮಾರುಕಟ್ಟೆಯಲ್ಲೇ ಪಡೆದು ತಮ್ಮ ವ್ಯವಹಾರವನ್ನು ನಡೆಸಬೇಕಾಗಿರುತ್ತದೆ. ಆದುದರಿಂದ ಹಲವು ಬಾರಿ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಮತ್ತು ಖಾದ್ಯ ತೈಲಗಳ ಬೆಲೆಗಳು ಹೆಚ್ಚುವುದರಿಂದ ಹೋಟೆಲು ಮಾಲೀಕರುಗಳು ಬೆಲೆಯನ್ನು ಅನಿವಾರ್ಯವಾಗಿ ಹೆಚ್ಚಿಸಿದ ಸಂದರ್ಭ

ಗಳೂ ಉಂಟು. ಆದಾಗ್ಯೂ ಸರ್ಕಾರದವರು ಈ ವಿಷಯಕ್ಕೆ ಗಮನ ಹರಿಸಿ, ಹೋಟೆಲು ಮಾಲೀಕರು ಗಳೊಡನೆ ಚರ್ಚಿಸಿ, ಬೆಲೆಗಳು ಏರದಂತೆಯೂ ಹಾಗೂ ಗ್ರಾಹಕರಿಗೆ ತೊಂದರೆಯಾಗದಂತೆಯೂ ನೋಡಿಕೊಳ್ಳಲು ಶ್ರಮಿಸುತ್ತಿದೆ.

ಹಸಿರು ಕಾರ್ಡುದಾರರ ಬಗ್ಗೆ

೩೦ (೩೬) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಕಾನೂನು, ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಒಟ್ಟು ಎಷ್ಟು ಜನ ಹಸಿರು ಕಾರ್ಡುದಾರರು ಇವ್ದಾರೆ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಸಿರ್ಸಿ ತಾಲ್ಲೂಕಿನಲ್ಲಿ ೯,೪೯೪ ಹಸಿರು ಕಾರ್ಡುದಾರರೂ ಮತ್ತು ಸಿದ್ದಾಪುರ ತಾಲ್ಲೂಕಿನಲ್ಲಿ ೭,೫೬೯ ಹಸಿರು ಕಾರ್ಡುದಾರರೂ ಇದ್ದಾರೆ.

ಕಣಗಲಾ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಬಗ್ಗೆ

೩೧ (೯೯) ಶ್ರೀ ಮಲ್ಲಸರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕಣಗಲಾ ಗ್ರಾಮದ ಜನಸಂಖ್ಯೆ ಒಳಗೊಂಡ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳ ಹೆಸರುಗಳೇನು ಹಾಗೂ ಜನಸಂಖ್ಯೆ ಎಷ್ಟು ?

ಆ) ಈ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಕ್ಕಾಗಿ ಮಂಜೂರಾದ ಹಣವೆಷ್ಟು?

ಇ) ಕಟ್ಟಡಕ್ಕಾಗಿ ಭೂ ಸ್ವಾಧೀನತೆ ಕಾಯಿದೆಯ ವ್ಯಾಪ್ತಿಯಲ್ಲಿ ಜಮೀನು ವಶಪಡಿಸಿಕೊಳ್ಳಲು ತಡವಾಗುತ್ತಿರುವುದಕ್ಕೆ ಕಾರಣವೇನು ?

ಈ) ಘಟಕಕ್ಕೆ ಬೇಕಾಗುವ ಸಿಬ್ಬಂದಿ ವರ್ಗದ ವಿವರಗಳೇನು;

ಉ) ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣದಲ್ಲಿ ವಿಳಂಬವಾಗುತ್ತಿರುವುದು ನಿಜವಲ್ಲವೇ ?

ಊ) ಹಾಗಿದ್ದಲ್ಲಿ ಸರ್ಕಾರದವರು ಕೂಡಲೇ ನಿರ್ಮಾಣದ ಬಗ್ಗೆ ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—